KATK010000032021

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಇವರ ನ್ಯಾಯಾಲಯದಲ್ಲಿ

ವಿಶೇಷ ಮೊಕದ್ದಮೆ ಸಂಖ್ಯೆ **2/2021**

ಫಿರ್ಯಾದಿ ಃ ರಾಜ್ಯದ ಪರವಾಗಿ ತುಮಕೂರು ಸಿ.ಇ.ಎನ್. ಪೋಲೀಸ್

ವಿರುದ್ಧ

ಆರೋಪಿತರು ಃ ಅಮ್ಜದ್ ಖಾನ್ ಮತ್ತು ಇನ್ನೊಬ್ಬರು

<u>ದೋಷಾರೋಪಣೆ</u>

**ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್.** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಆದ ನಾನು ಆರೋಪಿತರಾದಃ

1. ಅಮ್ಜದ್ ಖಾನ್ ಬಿನ್ ವಜೀರ್ ಖಾನ್,
   35 ವರ್ಷ, ವ್ಯಾಪಾರ, ವಾಸಃ ಉರ್ಡಿಗೆರೆ,
   ತುಮಕೂರು ತಾಲ್ಲೂಕು.

2. ನಾರಾಯಣಪ್ಪ ಬಿನ್ ಲೇಟ್ ಪಾಪಣ್ಣ,
   67 ವರ್ಷ, ವಾಸಃ ಬೇವಿನಹಳ್ಳಿ ಪಾಳ್ಯ ಕ್ರಾಸ್,
   ಉರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿ.**19.9.2020** ರಂದು ಬೆಳಿಗ್ಗೆ **11.15** ಗಂಟೆ ಸಮಯದಲ್ಲಿ ತುಮಕೂರು ಸಿ.ಇ.ಎನ್ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ತುಮಕೂರು ತಾಲ್ಲೂಕು ಉರ್ಡಿಗೆರೆ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದ ಎದುರಿನ ಲಿಂಗಾಯಿತರ ಬೀದಿಯ ಸಿ.ಸಿ.ರಸ್ತೆಯ ಪೂರ್ವಕ್ಕೆ ಇರುವ ಕಾಂತಣ್ಣನ ಮನೆಯಲ್ಲಿ ಬಾಡಿಗೆಗೆ ವಾಸ ಇರುವ **1** ನೇ ಆರೋಪಿಯಾದ ನೀನು ನಿನ್ನ ಮನೆಯ ಮುಂದೆ ಅಕ್ರಮ ಹಣ ಸಂಪಾದನೆ ಮಾಡುವ ಉದ್ದೇಶದಿಂದ **2** ನೇ ಆರೋಪಿಯಿಂದ ಗಾಂಜಾವನ್ನು ಖರೀದಿಸಿ**,** ಕಾನೂನು ಬಾಹಿರವಾಗಿ

ಸರ್ಕಾರದಿಂದ ಯಾವುದೇ ರೀತಿಯ ಅಧಿಕೃತ ಪರವಾನಗಿ ಪಡೆಯದೆ ಮಾದಕ ವಸ್ತುವಾದ ಸುಮಾರು **400** ಗ್ರಾಂ ತೂಕದ ಅರ್ಧಂಬರ್ಧ ಒಣಗಿರುವ ಕಡ್ಡಿ ಸಮೇತ ಇರುವ ಗಾಂಜಾ ಸೊಪ್ಪನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಂಡು, ಮಾರಾಟ ಮಾಡಲು ಪ್ರಯತ್ನಿಸಿ, ತನ್ಮೂಲಕ ಎನ್.ಡಿ.ಪಿ.ಎಸ್.ಕಾಯ್ದೆ ಕಲಂ **20(b)(ii)(A)** ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿ.

ಎರಡನೆಯದಾಗಿ ಮೇಲ್ಕಂಡ ದಿನಾಂಕದಂದು ಮಧ್ಯಾಹ್ನ **1.00** ಗಂಟೆ ಸಮಯದಲ್ಲಿ **2** ನೇ ಆರೋಪಿಯಾದ ನೀನು ಉರ್ಡಿಗೆರೆ ಹೋಬಳಿ ಬೇವಿನಹಳ್ಳಿ ಕ್ರಾಸ್ ಬಳಿ ಇರುವ ನಿನ್ನ ವಾಸದ ಮನೆಯ ಮುಂಭಾಗ ಅಕ್ರಮ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಾನೂನು ಬಾಹಿರವಾಗಿ ಸರ್ಕಾರದಿಂದ ಯಾವುದೇ ರೀತಿಯ ಅಧಿಕೃತ ಪರವಾನಗಿ ಪಡೆಯದೆ ಮಾದಕ ವಸ್ತುವಾದ ಸುಮಾರು **2** ಕೆಜಿ **820** ಗ್ರಾಂ ತೂಕದ ಅರ್ಧಂಬರ್ಧ ಒಣಗಿರುವ ಕಡ್ಡಿ ಸಮೇತ ಇರುವ ಗಾಂಜಾ ಸೊಪ್ಪನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಂಡು, ಮಾರಾಟ ಮಾಡಲು ಪ್ರಯತ್ನಿಸಿ, ತನ್ಮೂಲಕ ಎನ್.ಡಿ.ಪಿ.ಎಸ್.ಕಾಯ್ದೆ ಕಲಂ **20(b)(ii)(B)** ರಡಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ:23.01.2014 ರಂದು ಆದೇಶಿಸಿದ್ದೇನೆ.

(ಬಿ.ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು